ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ ,
ಕುಂದಾಪುರ

ಸಿ.ಸಿ. ನಂಬ್ರ: 19/2024

ಚಾಸಾ: 7 ಪ್ರಾಸಾ:6

ದಿನಾಂಕ: 01.12.2025

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀ ಉದಯ ಕುಮಾರ್ ಎಸ್ |
| ತಂದೆಯ ಹೆಸರು | : | ಲೇಟ್ ಸೀತಾರಾಮ ಕಾಮತ್ |
| ವಯಸ್ಸು | : | 58 ವರ್ಷ |
| ಉದ್ಯೋಗ | : | ಮೋಟಾರು ವಾಹನ ನಿರೀಕ್ಷಕರು |
| ವಾಸ ಸ್ಥಳ | : | ಉಡುಪಿ |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ.ರವರಿಂದ:**

ನಾನು 2010 ರಿಂದ ಇಲ್ಲಿಯವರೆಗೂ ಮೋಟಾರು ವಾಹನ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿ: 13-11-2023 ರಂದು ಪಿ ಎಸ್ ಐ ಕುಂದಾಪುರ ಸಂಚಾರ ಇವರ ಕೋರಿಕೆ ಮೇರೆಗೆ ಅಪಘಾಕ್ಕೀಡಾಗಿದೆ ಎನ್ನಲಾದ ಕೆಎ-20-ಜಿ-0726 ಲಘು ಮೋಟಾರು ವಾಹನವನ್ನು ಠಾಣಾ ಠಾಣಾ ಆವರಣದಲ್ಲಿ ಪರೀಕ್ಷಿಸಿದ್ದು, ಈ ಕೆಳಕಂಡ ಜಖಂಗಳು ಕಂಡು ಬಂದಿರುತ್ತದೆ.

1. ಬಲಭಾಗದ ರೇರ್ View mirror, ಎದುರಿನ ವಿಂಡ್ ಗ್ಲಾಸ್, ವಿಂಡ್ ಗ್ಲಾಸ್ ಮೌಟಿಂಗ್ ಬಲಭಾಗದಲ್ಲಿ ಜಖಂ ಗೊಂಡಿರುತ್ತದೆ.

ಉಳಿದ ಬಿಡಿ ಭಾಗಗಳು ಸುಸ್ಥಿತಿಯಲ್ಲಿ ಇದ್ದವು.

ವಾಹನವನ್ನು ತಟಸ್ಥ ಸ್ಥಿತಿಯಲ್ಲಿ ಪರಿಶೀಲಿಸಿದ್ದು, ಬ್ರೇಕುಗಳು ಸುಸ್ಥಿತಿಯಲ್ಲಿ ಇರುವುದು ಕಂಡು ಬಂದಿರುತ್ತದೆ. ನನ್ನ ಅಭಿಪ್ರಾಯದಂತೆ ಅಪಘಾತವು ಯಾವುದೇ ಯಾಂತ್ರಿಕ ದೋಷದಿಂದ ಆಗಿರುವುದಿಲ್ಲ. ಈ ಬಗ್ಗೆ ನಾನು ವರದಿಯನ್ನು ನೀಡಿರುತ್ತೇನೆ. ಸಾಕ್ಷಿಯು ಸದ್ರಿ ವರದಿಯನ್ನು ನೋಡಿ ಗುರುತಿಸಿದ್ದು, ಸದ್ರಿ ದಾಖಲೆಯನ್ನು

ನಿಪಿ-8 ಎಂದು, ಸಾಕ್ಷಿ ಸಹಿಯನ್ನು ನಿಪಿ-8(ಎ) ಎಂದು ಗುರುತಿಸಲಾಯಿತು. ಸಾಕ್ಷಿ ನಿಪಿ-5 ಮತ್ತು 6ರಲ್ಲಿ ಸದ್ರಿ ವಾಹನವನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಾದ ಶ್ರೀ ಕೆ ಸಿ ಎಸ್ ರವರಿಂದಃ**

ಜೀಪಿನ ಬಂಪರ್ ನಲ್ಲಿ ಯಾವುದೇ ಜಖಂ ಕಂಡು ಬಂದಿಲ್ಲ. ಉಳಿದ ಜಖಂಗಳು ಯಾವ ಕಾರಣದಿಂದ ಸಂಭವಿಸಿದೆ ಎಂದು ಹೇಳಲಾಗುವುದಿಲ್ಲ.

**ಮರು ವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ. ದಂ. ಕುಂದಾಪುರ**